ಸಿಂಗ್ ಜಿಲ್ಲಾಧಿಕಾರಿಯಾಗಿದ್ದರು. ಎರಡು ವರ್ಷದ ಒಡನಾಟದಲ್ಲಿ ನಾವು ವೃತ್ತಿ ಹೊರತುಪಡಿಸಿ ಮತ್ತೇನನ್ನೂ ಚರ್ಚಿಸಿದವರಲ್ಲ. ಹೀಗಾಗಿ ಅವರಿಂದ ಕರೆ ಬರುತ್ತದೆ ಎಂದರೆ ಅದು ಪ್ರೊಫೆಷನಲ್ ಕಾರಣಕ್ಕೇ ಆಗಿರುತ್ತದೆ. ಅದೂ ಈ ಹೊತ್ತಲ್ಲಿ ಕರೆ ಮಾಡಿದ್ದಾರೆ ಎಂದರೆ ತುರ್ತು ಕರೆ ಎನ್ನುವುದು ಖಚಿತ. ತಟ್ಟೆ ಕೆಳಗಿಟ್ಟು, ಬಲಗೈಯಲ್ಲಿದ್ದ ಮುರಿದ ಚಪಾತಿ ಚೂರನ್ನು ಮತ್ತೆ ತಟ್ಟೆಗೆ ಹಾಕಿ, ವಾಡಿಕೆಯಂತೆ 'ನಾನು ಕರೀಗೌಡ, ಹೇಳಿ ಸರ್' ಅಂದೆ.

'ನೀವು ಕರೀಗೌಡ ಆಗಿರುವುದಕ್ಕೇ ಫೋನ್ ಮಾಡಿದ್ದು. ಉತ್ತರಾಖಂಡದಲ್ಲಿ ಮೇಘ ಸ್ಫೋಟವಾಗಿದೆ. ರಾಜ್ಯದಿಂದ ಯಾತ್ರೆಗೆಂದು ಹೊರಟ ಜನ ಕಣಿವೆಯಲ್ಲಿ ಸಿಲುಕಿಕೊಂಡಿದ್ದಾರೆ. ಅವರನ್ನು ಸುರಕ್ಷಿತವಾಗಿ ಕರೆತರಲು ಸರ್ಕಾರ ನನ್ನನ್ನು ನೇಮಿಸಿದೆ. ನನ್ನ ಜೊತೆ ಪೊಲೀಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಕೂಡ ಬರುತ್ತಿದ್ದಾರೆ. ನೀವು ನನ್ನ ಜೊತೆ ಬರಬೇಕು' ಎಂದು ಹೇಳಿ ಕಾಲ್ ಕಟ್ ಮಾಡುವವರಿದ್ದರು.

'ಸರ್, ನನ್ನದು ಟ್ರಾನ್ಸ್‌ಫರ್ ಆಗಿದೆ. ಹೊಸ ಹುದ್ದೆಗೆ ನಾಳೆ ವರದಿ ಮಾಡಿಕೊಳ್ಳಬೇಕೆಂದಿದ್ದೇನೆ' ಎಂದು ನಾನು ಮೆತ್ತಗೆ ಹೇಳಿದೆ.

'ಮುಖ್ಯ ಕಾರ್ಯದರ್ಶಿಗಳೇ ರೆಸ್ಕ್ಯೂ ಟೀಮ್‌ನಲ್ಲಿ ನಿಮ್ಮನ್ನು ಸೇರಿಸಲು ಒಪ್ಪಿದ್ದಾರೆ. ಇಂದೇ ರಾತ್ರಿ ಸರ್ಕಾರಿ ಆದೇಶ ಬರುತ್ತೆ. ನೀವು ಈ ಕೂಡಲೇ ಲಗೇಜ್ ಪ್ಯಾಕಪ್ ಮಾಡಿಕೊಳ್ಳಿ. ಬೆಳಗ್ಗೆ ಆರು ಗಂಟೆಗೆ ಏರ್‌ಪೋರ್ಟ್‌ಗೆ ಬನ್ನಿ. ಒಂದು ವಾರದ ಕಾರ್ಯಾಚರಣೆ' ಎಂದು ಚುಟುಕಾಗಿ ಹೇಳಿದರು.

'ಸರ್, ಫ್ಲೈಟ್ ಟಿಕೇಟ್ ಮಾಡಬೇಕಲ್ಲ' ಅಂದೆ. 'ನೀವು ತೊಂದರೆ ತೆಗೆದುಕೊಳ್ಳಬೇಡಿ, ಶಿಷ್ಟಾಚಾರ ಇಲಾಖೆ ಎಲ್ಲಾ ಮಾಡಿಸುತ್ತೆ. ನೀವು ರೆಡಿಯಾಗಿ ಆರು ಗಂಟೆಗೆ ಬಂದ್ರೆ ಬೋರ್ಡಿಂಗ್ ಪಾಸ್ ಕೂಡ ರೆಡಿ ಇರುತ್ತೆ' ಎಂದು ಹೇಳಿ ಫೋನ್ ಕಟ್ ಮಾಡಿದರು. ಎಲ್ಲವನ್ನೂ ಸಿದ್ಧ ಮಾಡಿಕೊಂಡ ನಂತರವೇ ನನಗೆ ಕರೆ ಮಾಡಿದ್ದರು.

ಬಟ್ಟೆಗಳನ್ನು ಪ್ಯಾಕ್ ಮಾಡಿ, ಬೆಳಗ್ಗೆ ಐದು ಗಂಟೆಗೆ ಬರುವಂತೆ ವಾಹನ ಚಾಲಕನಿಗೆ ತಿಳಿಸಿ, ನಾಲ್ಕು ಗಂಟೆಗೆ ಅಲಾರಾಂ ಇಟ್ಟು ಮಲಗಿದೆ. ನಾನು ಏರ್‌ಪೋರ್ಟ್ ತಲುಪುವ ಮೊದಲೇ ನವೀನ್ ರಾಜ್ ಸಿಂಗ್ ಮತ್ತು ಹೇಮಂತ್ ನಿಂಬಾಳ್ಕರ್ ಇಬ್ಬರು ಲಾಂಜ್‌ನಲ್ಲಿ ಕಾದಿದ್ದರು. ನಾವು ಹೊರಟ ವಿಮಾನ ಒಂದು ತಾಸು ಡೆಲ್ಲಿ ಏರ್‌ಪೋರ್ಟ್‌ನಲ್ಲಿ, ಸ್ಟಾಪ್ ಓವರ್ ನೀಡಿದ ನಂತರ ಹನ್ನೆರಡು ಗಂಟೆಗೆ ಡೆಹರಾಡೂನ್‌ನಲ್ಲಿ ಇಳಿದೆವು. ಮೊದಲೇ ಬುಕ್ ಆಗಿದ್ದ ಹೋಟೆಲ್‌ನಲ್ಲಿ ಸೂಟ್‌ಕೇಸ್‌ಗಳನ್ನು ಇಟ್ಟು, ಉತ್ತರಾಖಂಡ ಸರ್ಕಾರದ ಸಚಿವಾಲಯಕ್ಕೆ ತೆರಳಿದೆವು. ಮುಖ್ಯಮಂತ್ರಿಗೆ ರಾಜ್ಯ ಸರ್ಕಾರ ನೀಡಿದ್ದ ಪರಿಹಾರದ ಚೆಕ್ ಹಸ್ತಾಂತರಿಸಿ, ಸೀದಾ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಿ, ಸರ್ಕಾರ ಕೈಗೊಂಡಿರುವ ರೆಸ್ಕ್ಯೂ ಆಪರೇಷನ್ ಕ್ರಮಗಳ ಬಗ್ಗೆ ಮಾಹಿತಿ ಕಲೆ ಹಾಕಿದೆವು. ಒಂದಿಬ್ಬರು ಹಿರಿಯ ಅಧಿಕಾರಿಗಳ ಭೇಟಿ ಕೂಡ ಆಯಿತು. ಊಟ ಮಾಡಿ ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ಚರ್ಚಿಸುವುದೆಂದು ತೀರ್ಮಾನಿಸಿ ಹೋಟೆಲ್‌ನತ್ತ ಹೊರಟೆವು. ದಾರಿಯಲ್ಲಿ ಸಿಕ್ಕ ಅಂಗಡಿಯೊಂದರಲ್ಲಿ ಎ-3 ಸೈಜಿನ ಡ್ರಾಯಿಂಗ್ ಶೀಟ್ ಮತ್ತು ಬಣ್ಣದ ಸ್ಕೆಚ್ ಪೆನ್‌ಗಳನ್ನು ನವೀನ್ ರಾಜ್ ಸಿಂಗ್ ಸಾಹೇಬರು ಖರೀದಿಸಿದರು. ಮೇಘಸ್ಫೋಟದಿಂದಾಗಿ ವಿನಾಶಕಾರಿ ಪ್ರವಾಹ ಮತ್ತು ಭೂಕುಸಿತ ಉಂಟಾಗಿತ್ತು. ಹಿಂದೂಗಳು ಹೆಚ್ಚಾಗಿ ಬರುವ ಎಲ್ಲಾ ಧರ್ಮೀಯರೂ, ಪ್ರವಾಸಿ ಸಾಹಸಿಗಳನ್ನೂ ಆಕರ್ಷಿಸುವ ಪವಿತ್ರ ಚಾರ್‌ಧಾಮ್

